**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 32/2020**

ಪಿಡಬ್ಲ್ಯೂ:1

**ದಿನಾಂಕಃ02.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆಃ**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ**

ನಾನು ಓದಿಲ್ಲದ ಕಾರಣ ಪೋಸ್ಟ್ ಡೇಟೆಡ್ ಚೆಕ್ ಎಂದರೆ ಏನು ಎಂದು ತಿಳಿದುಕೊಂಡಿಲ್ಲ. ಆರೋಪಿ ನನ್ನನ್ನು ಬೇಟಿ ಮಾಡಿಲ್ಲ, ಹಣವನ್ನು ಕೇಳಿಲ್ಲ, ಆ ಕಾರಣಕ್ಕೆ ಯಾವ ದಿನಾಂಕಕ್ಕೆ ಬೇಟಿ ಮಾಡಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. 10 ಲಕ್ಷ ಹಣ ಕೊಟ್ಟಿದ್ದರೆ ಆರೋಪಿಗೆ ಆ ಹಣವನ್ನು ಹಿಂತಿರುಗಿಸುವ ಸಾಮರ್ಥ್ಯ ಇರಲಿಲ್ಲ, ಆ ವಿಚಾರವನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಹಣ ಕೇಳಿಲ್ಲ, ನಾನು ಹಣವನ್ನು ಕೊಟ್ಟಿಲ್ಲ, ಆ ಕಾರಕಣ್ಕೆ ಈ ವಿಚಾರವನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನ್ನ ಬಳಿ ಹಣ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿಗೆ 50 ಸಾವಿರ ರೂ ಹಣ ಬೇಕಾಗಿದ್ದು, ನನ್ನ ಬಳಿ 50 ಸಾವಿ ರೂ ಹಣ ಕೇಳಿದ್ದು, 10 ಲಕ್ಷ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಹಣ ಇರಲಿಲ್ಲ, ಗಂಗಾದರ್ ರವರ ಕಡೆಯಿಂದ 50 ಸಾವಿರ ರೂ ಹಣವನ್ನು ಆರೋಪಿಗೆ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಡುವಾಗ ಅವರು ಸಹಿ ಮಾಡಿದ ಖಾಲಿ ಚೆಕ್ ಅನ್ನು ಕೇಳಿದ್ದಕ್ಕೆ ಆರೋಪಿಯು ಸಹಿ ಮಾಡಿದ ಖಾಲಿ ಚೆಕ್ ಅನ್ನು ಪಡೆದು ಗಂಗಾಧರ್ ರವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಗಂಗಾಧರ್ ರವರ ಮೂಲಕ ನಾನು ಆರೋಪಿಗೆ ಹಣ ಕೊಡಿಸಿದ್ದಕ್ಕೆ ಆರೋಪಿ ತಿಂಗಳಿಗೆ 3 ಪರ್ಸೆಂಟ್ ನಂತೆ

ಬಡ್ಡಿಯನ್ನು ಗಂಗಾಧರ್ ರವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಾಧರ್ ರವರ ಬಳಿ ಬಡ್ಡಿ ಕೊಡುವ ಸಮಯದಲ್ಲಿ ಚೆಕ್ ನನ್ನ ಬಳಿ ಇದ್ದಿದ್ದರೆ ನಾನು ಆರೋಪಿಯ ಬಳಿ ಹಣ ಕೇಳುತ್ತಿದ್ದೆ ಎಂದರೆ ಸರಿಯಲ್ಲ. ಗಂಗಾದರಪ್ಪರವರ ಬೇಡಿಕೆಯ ಮೇರೆಗೆ ಬದ್ರತೆಗಾಗಿ ಆರೋಪಿ ಆ ಚೆಕ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ ಗಂಗಾಧರಪ್ಪರವರು ಆರೋಪಿಯನ್ನು ಹಣ ಕೇಳಿದ್ದು, ಆತ ಇಲ್ಲ ಎಂದು ಹೇಳಿದ ಮೇರೆಗೆ ಆ ಹಣವನ್ನು ನಾನು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು 50 ಸಾವಿರ ರೂ ಹಣ ಪಾವತಿಸುವಾಗ ಆರೋಪಿಯನ್ನು ಉದ್ದೇಶಪೂರ್ವಕವಾಗಿ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನೀಡಬೇಕಾದ ಹಣವನ್ನು ನಾನು ಗಂಗಾದರಪ್ಪ ರವರಿಗೆ ನೀಡಿದ ಕಾರಣ ಆರೋಪಿಯ ಚೆಕ್ ಅನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಗಂಗಾದರಪ್ಪ ರವರಿಂದ ಪಡೆದ ಆರೋಪಿಯ ಚೆಕ್ ಅನ್ನು ಆತನಿಗೆ ನೀಡದೇ ನಾನು ದುರುಪಯೋಗ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ 50 ಸಾವಿರ ರೂ ಹಣ ಪಾವತಿಸಿ ಚೆಕ್ ಅನ್ನು ವಾಪಸ್ಸು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಖಾತೆಗೆ 50 ಸಾವಿರ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಈ ವ್ಯವಹಾರಕ್ಕೂ ತುಂಬಾ ಹಿಂದೆ ಆರೋಪಿ ತನಗೆ ತೊಂದರೆ ಇದೆ ಎಂದು ಹೇಳಿ ನನ್ನ ಬಳಿ 50 ಸಾವಿರ ಪಡೆದಿದ್ದರು, ಆ ಹಣವನ್ನು ಖಾತೆಗೆ ಹಾಕಿರುತ್ತಾರೆ.

ನನಗೆ 10 ಲಕ್ಷ ರೂ ಹಣ ಕೊಡುವ ಆರ್ಥಿಕ ಸಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನನ್ನದೆಂದು ನುಡಿದಿರುತ್ತಾರೆ. ಸದರಿ ದಾಖಲೆ ಕರಾರು ಪತ್ರ ಆಗಿದ್ದು, ಅದನ್ನು ತೋರಿಸಿ ಆರೋಪಿ ಗಂಗಾದರಪ್ಪ ರವರಿಗೆ ಕೊಡಬೇಕಾದ 50 ಸಾವಿರ ರೂ ಹಣವನ್ನು ನಾನು ಪಾವತಿಸಿದ್ದು, ಆರೋಪಿ ನನಗೆ 50 ಸಾವಿರ

ಹಣವನ್ನು ನನ್ನ ಖಾತೆಗೆ ಹಾಕಿದ್ದು, ಆರೋಪಿಯಿಂದ ನನಗೆ ಯಾವುದೇ ಹಣ ಬಾಕಿ ಇಲ್ಲ ಎಂದು ಮಾಡಿಕೊಟ್ಟಿರುವ ಕರಾರು ಎಂದು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನಾನು ಮಾಡಿಕೊಟ್ಟಿಲ್ಲ, ಅದರಲ್ಲಿರುವ ಸಹಿ ನನ್ನದಲ್ಲ ಎಂದು ಹೇಳಿದ ಮೇರೆಗೆ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಆರೋಪಿಯ ಚೆಕ್ ನನ್ನ ಮನೆಯಲ್ಲಿ ಕಳೆದು ಹೋಗಿದೆ, ಸಿಕ್ಕಿದರೆ ವಾಪಸ್ಸು ಕೊಡುತ್ತೇನೆ ಎಂದು ಆರೋಪಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಹೆಚ್ಚಿನ ಹಣಕ್ಕಾಗಿ ಈ ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ
ಸಹಿ/-
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು